◆ **ಅಂದರೆ ನೀವು ಬರೆಯುತ್ತೀರಿ ಎನ್ನುವುದನ್ನು ಖಾಸಗಿಯಾಗಿರಿಸಬೇಕು ಎಂದುಕೊಂಡಿದ್ದಿರಾ?**

ಹೌದು. ಅದನ್ನು ನನ್ನ ಮಟ್ಟಿಗಷ್ಟೇ ಇಟ್ಟುಕೊಳ್ಳಬೇಕೆಂದಿದ್ದೆ. ಒಮ್ಮೆ ನೀವು ಬರೆಯುತ್ತೀರಿ ಅಂತ ಹೇಳಿಬಿಟ್ಟರೆ ಅದರಲ್ಲಿ ಇತರರೂ ಮೂಗುತೂರಿಸಲು ಶುರು ಮಾಡುತ್ತಾರೆ. ರ್‍ಯಾಂಡಮ್ ಹೌಸಿನಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಲೇಖಕಿ ಅಂತ ಹೇಳಿಕೊಂಡಿರಲಿಲ್ಲ.

◆ **ಯಾಕೆ?**

ಅದರಿಂದ ತೊಂದರೆಯಾಗುತ್ತಿತ್ತು. ಅವರು ನನ್ನನ್ನು ಕೆಲಸಕ್ಕೆ ನೇಮಿಸಿಕೊಂಡದ್ದು ಬರೆಯಲು ಅಲ್ಲ. ಹಾಗೊಂದು ವೇಳೆ ಹೇಳಿದ್ದರೆ ಕೆಲಸದಿಂದ ವಜಾ ಮಾಡಿಬಿಡುತ್ತಿದ್ದರು.

◆ **ಹೌದಾ?**

ಖಂಡಿತ. ಅಲ್ಲಿ ಕೆಲಸ ಮಾಡುತ್ತಿದ್ದ ಸಂಪಾದಕರಲ್ಲಿ ಯಾರೂ ಕಾದಂಬರಿ ಬರೆಯುತ್ತಿರಲಿಲ್ಲ. ಇ.ಎಲ್. ಡಾಕ್ಟೊರೊವ್ (ಅಮೆರಿಕನ್ ಕಾದಂಬರಿಕಾರ) ಕೂಡ ಅಲ್ಲಿನ ಕೆಲಸ ಬಿಟ್ಟರು. ಉಳಿದ ಸಂಪಾದಕರಲ್ಲಿ ಯಾರೂ ತಮ್ಮದೇ ಕಾದಂಬರಿಗಳನ್ನು ಬರೆದು ಪ್ರಕಟಿಸುತ್ತಿರಲಿಲ್ಲ.



◆ **ನೀವು ಹೆಣ್ಣು ಎನ್ನುವುದಕ್ಕೂ ಇದಕ್ಕೂ ಏನಾದರೂ ಸಂಬಂಧವಿದೆಯೇ?**

ಆ ರೀತಿ ಯೋಚಿಸಲಿಲ್ಲ. ಬಿಡುವಿಲ್ಲದಷ್ಟು ಕೆಲಸವಿತ್ತು. ಮತ್ತೆಂದೂ ಬದುಕಿನಲ್ಲಿ, ಸಾಂಗತ್ಯದಲ್ಲಾಗಲಿ, ಕೆಲಸದಲ್ಲಾಗಲಿ ಗಂಡಸರ ಇಚ್ಛೆ ತೀರ್ಮಾನಗಳಂತೆ ನಡೆದುಕೊಳ್ಳುವುದಿಲ್ಲ ಅಂತ ನಿರ್ಧರಿಸಿದ್ದೆ. ವಿಚ್ಛೇದನದಿಂದ ಸಿಕ್ಕ ಸ್ವಾತಂತ್ರ್ಯ ಅದ್ಭುತವಾಗಿತ್ತು. ಜೊತೆಗೆ ಮಕ್ಕಳಿದ್ದರು. ನನ್ನ ಸೋಲಿನ ಕುರಿತು ಚಿಂತಿಸಲಿಲ್ಲ. ಯಾರಾದರೂ ಗಂಡಸರಿಗೆ ಇಂದಲ್ಲ ನಾಳೆ ಅರ್ಥವಾಗಬಹುದು ಅಂದುಕೊಂಡೆ. ಈ ಹಿಂದೆ ನನಗೆ ಗೊತ್ತಿದ್ದ ಗಂಡಸರಿಗೆ ಇವೆಲ್ಲ ಚೆನ್ನಾಗಿ ಅರ್ಥವಾಗಿತ್ತು. ನನ್ನಪ್ಪ, ನನ್ನ ಶಿಕ್ಷಕರು ನಿಜಕ್ಕೂ ಬುದ್ಧಿವಂತರು. ಅವರಿಗೆ ಹೆಚ್ಚಿಗೆ ತಿಳಿದಿತ್ತು. ಆಮೇಲೆ ನನ್ನ ಬದುಕಿನಲ್ಲಿ ಬಹುಮುಖ್ಯ ಎಂದುಕೊಂಡ ವ್ಯಕ್ತಿಗೆ ಇವೆಲ್ಲ ಅರ್ಥವಾಗಲಿಲ್ಲ.

◆ **ನೀವು ಹೇಳುತ್ತಿರುವುದು ನಿಮ್ಮ ಗಂಡನ ಬಗ್ಗೆಯೇ?**

ಹೌದು. ಅವನಿಗೆ ಅವನ ಜೀವನ ಚೆನ್ನಾಗಿ ಗೊತ್ತಿತ್ತೇ ಹೊರತು ನನ್ನದಲ್ಲ. ಕಡೆಗೊಮ್ಮೆ ಅದಕ್ಕೊಂದು ಪೂರ್ಣವಿರಾಮ ಹಾಕಿದೆ. ಎಲ್ಲವನ್ನೂ ಹೊಸದಾಗಿ ಆರಂಭಿಸಿ ಬೆಳೆಯಬೇಕು ಅಂದುಕೊಂಡೆ. ಮಕ್ಕಳೊಂದಿಗೆ ಮನೆಯನ್ನು ಬಿಡುವ ನಿರ್ಧಾರ ಮಾಡಿದೆ. ಕೆಲಸ ಮಾಡುವುದಕ್ಕೆ ಮಾತ್ರವಲ್ಲ, ನನ್ನ ಸಾಮರ್ಥ್ಯವನ್ನು ಅರಿಯಲು ಪ್ರಕಾಶನ ಕ್ಷೇತ್ರ ಸೇರಿದೆ.

◆ **ರ್‍ಯಾಂಡಮ್ ಹೌಸಿನಲ್ಲಿರುವವರಿಗೆ ತಮ್ಮ ನಡುವೆಯೇ ಲೇಖಕಿಯೊಬ್ಬಳು ಇದ್ದಾಳೆ ಎನ್ನುವುದು ಯಾವಾಗ ತಿಳಿಯಿತು?**